## ನಾಗರಪಂಚಮೀ ವ್ರತ

ಶ್ರಾವಣ ಶುದ್ಧ ಚತುರ್ಥೀ ನಾಗರ ಚೌತಿ, ಪಂಚಮೀ ನಾಗರ ಪಂಚಮೀ. ಮಕ್ಕಳಾಗದವರು ವಿಶೇಷವಾಗಿ ಮತ್ತು ಮಕ್ಕಳಿಗೆ ಯಾವ ವಿಧವಾದ ಆಪತ್ತು ಬರಬಾರದು ಎನ್ನುವವರು ಮಾಡಬೇಕಾದ ವ್ರತಗಳು.

ಪರಮಾತ್ಮ ಶೇಷದೇವರನ್ನು ಪಂಚಮೀತಿಥಿಗೆ ನಿಯಾಮಕರನ್ನಾಗಿ ಮಾಡಿದ್ದಾನೆ –

**ಪ್ರಾದಾಂ ತೃತೀಯಾಂ ಪಾರ್ವತ್ಯೈ**
**ಗಣೇಶಾಯ ಚತುರ್ಥಿಕಾಮ್ ।**
**ಪಂಚಮೀ ಸರ್ವನಾಗಾನಾಂ**
**ಶೇಷಾಣಾಂ ಪತಯೇ ತತಃ ।।**

ಎಂದು ವರಾಹಪುರಾಣದಲ್ಲಿದೆ. ತೃತೀಯಾತಿಥಿಗೆ ಪಾರ್ವತಿಯನ್ನು ನಿಯಾಮಕಳನ್ನಾಗಿಯೂ, ಚತುರ್ಥೀತಿಥಿಗೆ ಗಣಪತಿಯನ್ನು ನಿಯಾಮಕನನ್ನಾಗಿಯೂ ಹಾಗೂ ಪಂಚಮೀತಿಥಿಗೆ

ಶೇಷದೇವರನ್ನು ನಿಯಾಮಕರನ್ನಾಗಿಯೂ ಪರಮಾತ್ಮ ಮಾಡುತ್ತಾನೆ.

ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮೀ ನಾಗರ ಪಂಚಮೀ. ಈ ದಿವಸ ವಿಶೇಷವಾಗಿ ಹಾವುಗಳನ್ನು ಹಾವುಗಳ ಅಧಿಪತಿಯಾದ ಶೇಷದೇವರನ್ನು ಆರಾಧಿಸಬೇಕು.

ಇದು ಎರಡು ದಿವಸಗಳ ವ್ರತ. ಅದಕ್ಕಾಗಿಯೇ ಎರಡೂ ದಿವಸಗಳನ್ನು ಶೇಷದೇವರ ಹೆಸರಿನಿಂದಲೇ ಗುರುತಿಸಲಾಗುತ್ತದೆ. ನಾಗರ ಚೌತಿ ಮತ್ತು ನಾಗರ ಪಂಚಮಿ ಎಂದು.

**ಯುಗಂ ಮಧ್ಯಂದಿನೇ ಯತ್ರ**
**ತತ್ರೋಪೋಷ್ಯ ಫಣೀಶ್ವರಾನ್ ।**
**ಕ್ಷೀರೇಣಾಪ್ಯಾಯ್ಯ ಪಂಚಮ್ಯಾಂ**
**ಪಾರಯೇತ್ ಪ್ರಯತೋ ನರಃ ।**
**ವಿಷಾಣಿ ತಸ್ಯ ನಶ್ಯಂತಿ**
**ನ ತಂ ಹಿಂಸಂತಿ ಪನ್ನಗಾಃ ।।**

ನಾಗರ ಚೌತಿಯಂದು ಪೂರ್ಣ ಉಪವಾಸವನ್ನು ಮಾಡಬೇಕು. ಆ ದಿವಸ ಮಧ್ಯಾಹ್ನ ದೇವರ

ಪೂಜೆಯಾದ ಬಳಿಕ ಶೇಷದೇವರ ಪ್ರತಿಮೆಗೆ ಹಾಲಿನ ಅಭಿಷೇಕದೊಂದಿಗೆ ಷೋಡಶೋಪಚಾರ ಪೂಜೆಯನ್ನು ಸಮರ್ಪಿಸಬೇಕು. ಮಾರನೆಯ ದಿವಸ ಪ್ರಾತಃಕಾಲದಲ್ಲಿ ಮತ್ತೆ ಹಾಲಿನ ಅಭಿಷೇಕವನ್ನು ಮಾಡಿ, ಹದಿನಾರು ಉಪಚಾರಗಳನ್ನು ಶೇಷದೇವರಿಗೆ ಸಮರ್ಪಿಸಿ ಜ್ಞಾನಿಗಳನ್ನು ಕರೆದು ಅವರಿಗೆ ಭೋಜನವನ್ನು ನೀಡಿ ತಾನು ಪಾರಣೆಯನ್ನು ಮಾಡಬೇಕು.

ಈ ಉಪವಾಸ ನಿತ್ಯವಲ್ಲ. ಅಂದರೆ ಮಾಡಲೇಬೇಕು ಎಂದು ನಿಯಮವಿಲ್ಲ. ಉತ್ತಮ ದಾಂಪತ್ಯ, ಮಕ್ಕಳು, ಸರ್ಪಗಳಿಂದ ಭಯನಿವಾರಣೆ ಮುಂತಾದ ಅಪೇಕ್ಷೆ ಇರುವವರು ಉಪವಾಸವನ್ನು ಮಾಡಬಹುದು.

ಆದರೆ ಇದನ್ನು ವ್ರತವನ್ನಾಗಿ ಆಚರಿಸುವವರು ಉಪವಾಸವನ್ನು ಮಾಡಲೇಬೇಕು. ಕೇವಲ ಪೂಜೆಯನ್ನು ಸಲ್ಲಿಸಿ ಸ್ತೋತ್ರಗಳನ್ನು ಸಲ್ಲಿಸುವವರು ಉಪವಾಸ ಮಾಡಬೇಕೆಂಬ ನಿಯಮವಿಲ್ಲ.

ಉಪವಾಸ ಮಾಡದೇ ಹಾಲು ಹಣ್ಣುಗಳನ್ನು ಸ್ವೀಕರಿಸಬಹುದು. ಊಟ ಮಾಡುವವರು ಹುರಿದ ಕರಿದ ಪದಾರ್ಥಗಳನ್ನು ತಿನ್ನದೇ ಇರುವ ನಿಯಮಗಳನ್ನು ಪಾಲಿಸುತ್ತಾರೆ. ಆದರೆ ಪ್ರತಿಯೊಬ್ಬರೂ ನಾಗದೇವರ ಪೂಜೆಯನ್ನು ಅವಶ್ಯವಾಗಿ ಮಾಡಲೇಬೇಕು.

## ಪೂಜೆಯ ಕ್ರಮ

ಮನೆಯ ಬಾಗಿಲಿನ ಎರಡೂ ಭಾಗಗಳಲ್ಲಿ ಶೇಷದೇವರ ಚಿತ್ರವನ್ನು ಬರೆದು ಪೂಜಿಸಬೇಕು ಎಂದು ಭವಿಷ್ಯಪುರಾಣದಲ್ಲಿ ತಿಳಿಸಿದ್ದಾರೆ —

**ಶ್ರಾವಣೇ ಮಾಸಿ ಪಂಚಮ್ಯಾಂ**
**ಶುಕ್ಲಪಕ್ಷೇ ನರಾಧಿಪ**
**ದ್ವಾರಸ್ಯೋಭಯತೋ ಲೇಖ್ಯಾ**
**ಗೋಮಯೇನ ವಿಷೋಲ್ಬಣಾಃ**

**ಪೂಜಯೇದ್ ವಿಧಿವದ್ ವೀರ**
**ದಧಿದೂರ್ವಾಂಕುರೈಃ ಕುಶೈಃ**
**ಗಂಧಪುಷ್ಪೋಪಹಾರೈಶ್ಚ**
**ಬ್ರಾಹ್ಮಣಾನಾಂ ಚ ತರ್ಪಣೈಃ**

**ಯೇ ತಸ್ಯಾಂ ಪೂಜಯಂತೀಹ**
**ನಾಗಾನ್ ಭಕ್ತಿಪುರಃಸರಾಃ**
**ನ ತೇಷಾಂ ಸರ್ಪತೋ ವೀರ**
**ಭಯಂ ಭವತಿ ಕುತ್ರಚಿತ್**

ಬಾಗಿಲಿನ ಎರಡೂ ಕಡೆಯಲ್ಲಿ ಹಾವುಗಳ ಚಿತ್ರವನ್ನು ಬರೆದು, ಅಲ್ಲಿ ಶೇಷದೇವರ, ವಾಸುಕಿಯ ಸನ್ನಿಧಾನವನ್ನು ಚಿಂತಿಸಿ, ಅರಿಶಿನ ಕುಂಕುಮಗಳಿಂದ ಪೂಜಿಸಿ ಅದಕ್ಕೆ ಗೆಜ್ಜೆವಸ್ತ್ರವನ್ನು ಸಮರ್ಪಿಸಬೇಕು.

ಆ ಬಳಿಕ ಮನೆಯ ಒಳಗೆ ಶೇಷದೇವರ ಪ್ರತಿಮೆಗೆ ಹಾಲು, ತುಪ್ಪ,  ಮುಂತಾದವುಗಳಿಂದ ಅಭಿಷೇಕ ಮಾಡಿ, ಆ ನಂತರ ಗರಿಕೆ, ದರ್ಭೆಗಳಿಂದ ಷೋಡಶೋಪಚಾರ ಪೂಜೆಯನ್ನು ಮಾಡಿ, ಪರಮಾತ್ಮನಲ್ಲಿ ಭಕ್ತಿ ಇರುವ ಬ್ರಾಹ್ಮಣರನ್ನು ಆದರಿಸಿ, ಅವರ ಭೋಜನವಾದ ನಂತರ ಭೋಜನ ಮಾಡಬೇಕು.

ಪೂಜೆ ಮಾಡುವ ಸಂದರ್ಭದಲ್ಲಿ, ಹಾಲು, ತುಪ್ಪ ಎರೆಯುವ ಸಂದರ್ಭದಲ್ಲಿ ಕೆಳಗಿನ ಶ್ಲೋಕವನ್ನು ಭಕ್ತಿಯಿಂದ ಪಠಿಸಿ ಪ್ರಾರ್ಥನೆ ಮಾಡಿಕೊಳ್ಳಬೇಕು.

**ಅನಂತಶಯನಂ ದೇವಂ**
**ಸರ್ವಶೋಕವಿನಾಶನಮ್ ।**
**ಲೋಕಾಧಾರಂ ವಾರುಣೀಶಂ**
**ನಾಗೇಂದ್ರಂ ಸನ್ನಮಾಮ್ಯಹಮ್ ।।**

ಅನಂತಶಯನಂ — ದೇಶ ಕಾಲಗಳನ್ನು ಮೀರಿದ ಪರಮಾತ್ಮನಿಗೆ ಶಯನನಾದ
ಸರ್ವಶೋಕವಿನಾಶನಂ — ಸಕಲ ದುಃಖಗಳನ್ನೂ ಪರಿಹರಿಸುವ
ಲೋಕಾಧಾರಂ — ಇಡಿಯ ಜಗತ್ತನ್ನು ತಲೆಯ ಮೇಲೆ ಹೊತ್ತು ರಕ್ಷಣೆ ಮಾಡುತ್ತಿರುವ
ವಾರುಣೀಶಂ — ವಾರುಣೀಪತಿಯಾದ
ದೇವಂ — ದೇವೋತ್ತಮನಾದ
ನಾಗೇಂದ್ರಂ — ಶೇಷದೇವರನ್ನು
ಅಹಂ — ನಾನು
ಸನ್ನಮಾಮಿ — ಭಕ್ತಿ ಶ್ರದ್ಧೆಗಳಿಂದ ನಮಸ್ಕರಿಸುತ್ತೇನೆ.

ಹಾಗೆಯೇ ಶೇಷದೇವರ ಮಾಹಾತ್ಮ್ಯ, ಅವರು, ನರನಾಗಿ, ಲಕ್ಷ್ಮಣನಾಗಿ, ಬಲರಾಮನಾಗಿ ಅವತಾರ ಮಾಡಿ ಪರಮಾತ್ಮನನ್ನು ಸೇವಿಸಿದ ರೀತಿ ಮುಂತಾದವನ್ನು ಭಕ್ತಿಯಿಂದ ಸ್ಮರಣೆ ಮಾಡಬೇಕು.

## ಶೇಷ-ಸುಬ್ರಹ್ಮಣ್ಯ-ವಾಸುಕಿ

ಹಾಗೆಯೇ ಮತ್ತೊಂದು ತತ್ವ. ಹಾವಿನ ರೂಪದಲ್ಲಿ ಪೂಜೆಯಾಗುವ ಮೂರು ದೇವತೆಗಳಿದ್ದಾರೆ. ಮೊದಲನೆಯದು ಶೇಷದೇವರು. ಇವರು ಇಂದ್ರನಿಗಿಂತಲೂ ಉತ್ತಮರಾದ, ರುದ್ರದೇವರಿಗೆ ಸಮಾನರಾದ ದೇವತೆ. ಇವರೇ ಪರಮಾತ್ಮ ಹಾಸಿಗೆ.

ಎರಡನೆಯದು ಸುಬ್ರಹ್ಮಣ್ಯದೇವರು. ಇವರು ಇಂದ್ರನಿಗೆ ಸಮಾನನಾದ ದೇವತೆ. ದೇವತೆಗಳ ಸೇನಾನಿ ಸ್ಕಂದನಿಗೇ ಸುಬ್ರಹ್ಮಣ್ಯ ಎನ್ನುವ ಹೆಸರು. ಇವರಿಗೆ ಸುಬ್ರಹ್ಮಣ್ಯರೂಪದಲ್ಲಿ ಮಾತ್ರ ಹಾವಿನರೂಪ.

ಮೂರನೆಯದು ವಾಸುಕಿ. ಮೇಲಿನ ಇಬ್ಬರಿಗಿಂತಲೂ ಸಣ್ಣವರಾದ ದೇವತೆ. ಪಾತಾಳದಲ್ಲಿ ಎಲ್ಲ ನಾಗರಿಗೂ ಅಧಿಪತಿಯಾದ ನಾಗರಾಜ ಈ ವಾಸುಕಿಯೇ. ಶೇಷದೇವರ ತಮ್ಮ.

ನಾಗರ  ಚೌತಿ-ಪಂಚಮಿಗಳಂದು ಈ ಮೂರೂ ದೇವತೆಗಳನ್ನು ಪೂಜಿಸುವ ಸಂಪ್ರದಾಯವಿದೆ. ವಿಶೇಷವಾಗಿ ಶೇಷದೇವರನ್ನು.

ಈ ದಿವಸಗಳಲ್ಲಿ ಈ ವ್ರತವನ್ನು ಕೇವಲ ಹೆಣ್ಣುಮಕ್ಕಳು ಮಾತ್ರ ಮಾಡುತ್ತಾರೆ. (ಈ ವ್ರತವೇನು, ನಮ್ಮಲ್ಲಿ ಅನೇಕ ಧರ್ಮಗಳು ಉಳಿದಿರುವದೇ ಕೇವಲ ನಿಷ್ಠಾವಂತ ಹೆಣ್ಣುಮಕ್ಕಳಿಂದ.)

ಆದರೆ, ಈ ವ್ರತವನ್ನು ಬಾಲಕ ಬಾಲಕಿಯರೂ ಮಾಡಬೇಕು. ಗಂಡ ಹೆಂಡತಿಯರೂ ಕೂಡಿ ಮಾಡಬೇಕು.

ಗಂಡಹೆಂಡಿರ ಮಧ್ಯದಲ್ಲಿ ನಿಶ್ಚಲವಾದ ಪ್ರೇಮವನ್ನುಂಟುಮಾಡುವ ವ್ರತ ಈ ನಾಗರವ್ರತ.

ಮಕ್ಕಳಾದವರಿಗೆ ಮಕ್ಕಳನ್ನು ದಯಪಾಲಿಸುವ ವ್ರತ ಈ ನಾಗರವ್ರತ.

ಮಕ್ಕಳನ್ನು ಎಲ್ಲ ಆಪತ್ತುಗಳಿಂದ ದೂರ ಮಾಡುವ ವ್ರತ ಈ ನಾಗರವ್ರತ.

ಮಕ್ಕಳಿಗೆ, ನಮಗೆ ವಿಷದ ಭಯವನ್ನು ನೀಗಿಸುವ ವ್ರತ ಈ ನಾಗರವ್ರತ.

ಅಣ್ಣತಮ್ಮಂದಿರಿಗೆ ಸೌಭಾಗ್ಯವನ್ನುಂಟು ಮಾಡುವ ವ್ರತ ಈ ನಾಗರವ್ರತ.

“ಕಲ್ಲಿನ ಹಾವಿಗೆ ಹಾಲರೆದು ನಿಜವಾದ ಹಾವು ಬಂದಾಗ ಕಲ್ಲು ಹೊಡೆಯುತ್ತಾರೆ” ಎಂಬ ನಾಸ್ತಿಕರ ಆಕ್ಷೇಪಕ್ಕೆ ಮುಂದಿನ ಲೇಖನದಲ್ಲಿ[1] [VNA103] ಉತ್ತರವನ್ನು ನೀಡುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

---

1 **Click here to open VNA103**

http://vishwanandini.com/fullarticle.php?serialnumber=VNA103

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491